ಕರ್ನಾಟಕ ವಿಧಾನ ಸಭೆ

ಬುಧವಾರ 12ನೇ ಫೆಬ್ರವರಿ 1997 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್‌ಕುಮಾರ್‌ವರು ಪೀಠವನ್ನು ಅಲಂಕರಿಸಿದ್ದರು.

(ಸಭೆಯು ಬೆಳಿಗ್ಗೆ 11.00 ನಿಮಿಷಕ್ಕೆ ಪ್ರಾರಂಭವಾಯಿತು)

(ಅಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

1. ಸಂತಾಪ ಸೂಚನೆ

ಅಧ್ಯಕ್ಷರು:- ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ರಾಜ ತಿರುಮಲದೇವರಾಯರು ದಿನಾಂಕ 17.12.1996 ರಂದು ನಿಧನರಾದರು. ಶ್ರೀಯುತರು 3 ಮತ್ತು 4ನೇ ವಿಧಾನ ಸಭೆಗೆ ಗಂಗಾವತಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಹಳ್ಳಿಗಳ ಏಳಿಗೆಗೆ ಹಾಗೂ ಸಹಕಾರ ಚಳುವಳಿಯ ಅನುಷ್ಠಾನದಲ್ಲಿ ಅಪಾರ ಆಸಕ್ತಿಯನ್ನು ವಹಿಸಿದ್ದರು. ತುಂಗಭದ್ರಾ ಸಲಹಾ ಮಂಡಳಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು. ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನವು ಒಂದು ನಿಮಿಷ ಮೌನವನ್ನಾಚರಿಸಿತು)

ಅಧ್ಯಕ್ಷರು:- ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದರ ಜೊತೆಗೆ ಶ್ರೀ ಮಹೇಂದ್ರ ಕುಮಾರ್‌ರವರು ನಿಧನರಾಗಿದ್ದನ್ನು ಸೇರಿಸಬೇಕಾಗಿತ್ತು.

ಅಧ್ಯಕ್ಷರು:- ಯಾರು ನಮ್ಮ ಬೀದರ್ ಶಾಸಕರಾಗಿದ್ದವರು? ಯಾವಾಗ ಮೃತಪಟ್ಟರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಮೃತರಾಗಿ 15-20 ದಿವಸಗಳಾಯಿತು.

ಅಧ್ಯಕ್ಷರು:- ನಮಗೆ ಗೊತ್ತಾಗಲೇ ಇಲ್ಲ. ಈ ದಿವಸ ಸಂತಾಪ ಸೂಚನೆಯನ್ನು ಮಾಡಿ ಮುಗಿಸಿಬಿಟ್ಟಿರುತ್ತೇವೆ. ನಾಳೆಯ ದಿವಸ ತೆಗೆದುಕೊಳ್ಳೋಣ. ದಯವಿಟ್ಟು ಕ್ಷಮಿಸಬೇಕು, ಈಗ ಪ್ರಶ್ನೋತ್ತರ ವೇಳೆ ಇದೆಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಪ್ರಶ್ನೋತ್ತರ ವೇಳೆ ಇದೆ. ಅದನ್ನು ಬದಿಗಿಟ್ಟು...

ಅಧ್ಯಕ್ಷರು:- ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪ್ರಶ್ನೋತ್ತರ ವೇಳೆಯನ್ನು ಮೊಟಕುಗೊಳಿಸಬೇಕು ಅಥವಾ ಅದನ್ನು ಕಡೆಗಣಿಸಬೇಕೆಂದು ನನ್ನ ಅಭಿಪ್ರಾಯವಲ್ಲ. ಏಕೆಂದರೆ ಸಾಮಾನ್ಯವಾಗಿ 10-15 ಸದಸ್ಯರುಗಳು ಪ್ರಶ್ನೋತ್ತರ ವೇಳೆಯಲ್ಲಿ ಭಾಗಿಗಳಾಗಿ ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟಂತರ

ವಿಚಾರಗಳಾಗಲಿ, ರಾಜ್ಯಕ್ಕೆ ಸಂಬಂಧಪಟ್ಟ ವಿಷಯವನ್ನಾಗಲಿ ಪ್ರಸ್ತಾಪ ಮಾಡುತ್ತಾರೆ. ಆದುದರಿಂದ ನಿಜವಾಗಿಯೂ ಅವರ ಒಂದು ಸಮಯವನ್ನು ನಾನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಅದಕ್ಕೆ ನಾನು ಸಹಕರಿಸುತ್ತೇನೆ. ಹೆಜ್ಜಾಲದಲ್ಲಿ ನಡೆದಂತಹ ಫೈರಿಂಗ್ ಅತ್ಯಂತ ಮಹತ್ವದಾಗಿದೆ. ಅದಕ್ಕಾಗಿ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ತಾವು ಪ್ರಶ್ನೋತ್ತರ ವೇಳೆಯ ನಂತರ ಈ ವಿಷಯವನ್ನು ತೆಗೆದುಕೊಳ್ಳೋಣವೆಂದರೆ ನನ್ನದು ಏನು ಅಭ್ಯಂತರವಿಲ್ಲ. ಆದರೆ ನನ್ನ ಅಭಿಪ್ರಾಯವೇನೆಂದರೆ ಪ್ರಶ್ನೋತ್ತರ ವೇಳೆಯನ್ನು ಮೊಟಕುಗೊಳಿಸಿ ಮಾಡಿದರೆ ಅದಕ್ಕೆ ಮಹತ್ವ ಬರತ್ತುದೆಂದು...

ಅಧ್ಯಕ್ಷರು:- ಇಂತಹ ಘಟನೆ ಸನ್ನಿವೇಶ ನಡೆದಿರುವಂಥದ್ದು ಇದೇ ಮೊದಲು ಅಲ್ಲ. ನಮ್ಮ ಕಾರ್ಯಕ್ರಮದ ಪ್ರಕಾರ ಈಗ ಪ್ರಶ್ನೋತ್ತರ ವೇಳೆ ಇದೆ. ಬಿ.ಜೆ.ಪಿ. ಸದಸ್ಯರುಗಳು, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ಶ್ರೀ ಶ್ರೀರಾಮರೆಡ್ಡಿಯವರು ಎಲ್ಲರೂ ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ. ಆ ವಿಚಾರವನ್ನು ಪ್ರಶ್ನೋತ್ತರ ವೇಳೆಯಾದ ಬಳಿಕ ಚರ್ಚೆಗೆ ತೆಗೆದುಕೊಳ್ಳೋಣ. ಇದಕ್ಕೆ ದಯಮಾಡಿ ಸಹಕರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಹತ್ವವನ್ನು ಕೊಡೋಣ ಎನ್ನುವ ದೃಷ್ಟಿಯಿಂದ ನಾನು ಹೇಳಿದ್ದುದು. ಏಕೆಂದರೆ ಇಂಥದ್ದು ಅನೇಕ ಸಲ ಆಗಿದೆ ಎಂದು ಅಲ್ಲ; ಆದರೆ ಈ ರೀತಿಯಾದಂತಹ ಘಟನೆ ಬೇರೆ ಆಗಿಲ್ಲ ಏತಕ್ಕಾಗಿಲ್ಲವೆಂದರೆ ಅದರಲ್ಲಿಯೂ ಚುನಾವಣೆ ನಡೆಯುವಂತಹ ಸಮಯದಲ್ಲಿ ಪೋಲೀಸ್‌ನವರೇ ಇದೊಂದು ಮರ್ಡರ್ ರೂಪದಲ್ಲಿ 5-6 ಜನಗಳ ಮೇಲೆ ಫೈರಿಂಗ್ ಮಾಡಿ.

MR. SPEAKER:- Whatever you want to submit you can do so after the Question Hour when we take up this matter under preliminary submission; you are entitled and you are at liberty to make that submission.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಹೇಳಿರುವುದರಿಂದ ನಾನು ಕುಳಿತು ಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಇದರ ಮಹತ್ವ ಎಷ್ಟು ಇದೆ ಎಂದು ಅರಿವು ಮಾಡಿಕೊಂಡು ಪ್ರಶ್ನೋತ್ತರ ಕಾಲವನ್ನು ಬದಿಗೊತ್ತುವುದರಿಂದ ಇದಕ್ಕೆ ಮಹತ್ವ ಸಿಕ್ಕಿದಂತಾಗುತ್ತದೆ. ಇತ್ತೀಚಿನ ದಿನಗಳಲ್ಲಿ ನಡೆದಿರತಕ್ಕಂತಹ ಗೋಲಿಬಾರ್‌ಗೂ ಹಿಂದೆ ನಡೆದಿರತಕ್ಕಂತಹ ಗೋಲಿಬಾರ್‌ಗೂ ಬಹಳ ವ್ಯತ್ಯಾಸ ಇದೆ. ಆದುದರಿಂದ ದಯಮಾಡಿ ಪ್ರಶ್ನೋತ್ತರ ಕಾಲವನ್ನು...

ಅಧ್ಯಕ್ಷರು:- ಈಗಾಗಲೇ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ, ಈ ವಿಷಯದ ಪ್ರಾಮುಖ್ಯತೆಯನ್ನು ನಾನು ಅಲ್ಲಗಳೆಯುತ್ತಿಲ್ಲ; ಪ್ರಶ್ನೋತ್ತರ ಮುಗಿಸಿದ ನಂತರ ಈ ವಿಚಾರವನ್ನು ಖಂಡಿತ ನಾವು ಪ್ರಸ್ತಾವಕ್ಕೆ ತೆಗೆದುಕೊಳ್ಳೋಣ. ಆಗ ತಮಗೆಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ. ತಾವು ಏನೆಲ್ಲಾ ಹೇಳಬೇಕೆಂದಿದ್ದೀರಿ ಅದನ್ನೆಲ್ಲಾ ಆಗ ಖಂಡಿತ ಹೇಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ:- ಹಿಂದೆ ಅನೇಕ ಸಾರಿ ಇದೇ ಸಂದರ್ಭದಲ್ಲಿ ಇಂತಹ ಮಹತ್ವದ ವಿಷಯ ಬಂದಾಗ ಪ್ರಶ್ನೆಯ ವೇಳೆಯನ್ನು ಮುಂದೆ ಹಾಕಿ ಚರ್ಚೆಗೆ ತೆಗೆದುಕೊಂಡಿರತಕ್ಕ ಒಂದು ಸಂಪ್ರದಾಯ ಇದೆ. ಇದು ಏನೂ ಹೊಸ ಸಂಪ್ರದಾಯವಲ್ಲ.

ಅಧ್ಯಕ್ಷರು:- ಹೊಸದೇನಲ್ಲ ಹಳೇಯದೇ ಮೊದಲು ಪ್ರಶ್ನೋತ್ತರ ಮುಗಿಯಲಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಎಷ್ಟು ಸಲ ಅವರಿಗೆ ಡಿಫೆಂಡ್ ಮಾಡುತ್ತೀರಿ? ಮುಖ್ಯಮಂತ್ರಿಗಳು ಇಲ್ಲ ಎಂದು ಎಷ್ಟು ಸಲ ಹೇಳುತ್ತೀರಿ? ನಿಮಗೆ ನೀವು ಡಿಫೆಂಡ್ ಮಾಡಿಕೊಳ್ಳುವಷ್ಟು ಶಕ್ತಿ ಉಳಿದಿಲ್ಲ. ಅದಕ್ಕಾಗಿ ಅಧ್ಯಕ್ಷರ ಆಶ್ರಯದಲ್ಲಿ ಎಷ್ಟು ದಿವಸ ನೀವು ಬೇಳೆಯಬೇಕೆಂದು ಮಾಡಿದ್ದೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಸರ್ಕಾರ ರಕ್ಷಣೆ ಮಾಡತಕ್ಕ ಉದ್ದೇಶದಲ್ಲಿ ನಮ್ಮ ತಕರಾರು ಇಲ್ಲ. ಆದರೆ ಪರಿಸ್ಥಿತಿಯ ಗಂಭೀರತೆಯನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು:- ನಾನು ಮತ್ತು ತಾವು ಎಲ್ಲರೂ ಸೇರಿ ಇಲ್ಲಿ ಕೆಲವು ಮೌಲ್ಯಗಳನ್ನು ರಕ್ಷಣೆ ಮಾಡಬೇಕಾಗಿದೆ. ಅವರವರ ರಕ್ಷಣೆಯನ್ನು ಅವರೇ ಮಾಡಿಕೊಳ್ಳಬೇಕಾಗುತ್ತದೆ. ನಾನು ಯಾರನ್ನೂ ರಕ್ಷಿಸುವುದಕ್ಕಾಗುವುದಿಲ್ಲ. ನೀವು ಎಲ್ಲರೂ ಸೇರಿ ನನ್ನನ್ನು ರಕ್ಷಣೆ ಮಾಡಿದರೆ ಸಾಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಮ್ಮನ್ನು ರಕ್ಷಣೆ ಮಾಡುವವರು ನೀವೇ ಅವರಿಗೆ ರಕ್ಷಣೆ ಮಾಡುವುದಕ್ಕೆ ಪೋಲಿಸರು ಇದ್ದಾರೆ. ನಮಗೆ ಯಾರೂ ಇಲ್ಲ. ನಮಗೆ ನೀವೇ ರಕ್ಷಣೆ ಮಾಡಬೇಕು.

MR. SPEAKER:- Alright. We will take up questions.

SRI M. P. PRAKASH:- Our accusation is you are more fair to them only.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹೀಗೆ ಮಾಡಿ ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಾರೆ. ನೀವು ಪಾರ್ಷಿಯಲ್ ಇದ್ದೀರಿ ಎನ್ನುವ ಮಾತನ್ನು ಅವರು ಪ್ರಸ್ತಾಪ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಹೊಸ ವಿಚಾರ ಹೇಳಿದರು. ಇದನ್ನು ಕೇಳಿ ಬಹಳ ಗಾಬರಿಯಾಯಿತು. ಎಷ್ಟು ಸಾರಿ ಸರ್ಕಾರ ರಕ್ಷಣೆ ಕೊಡುವುದು? ಅಂದರೆ ನೀವು ಮೊದಲು ರಕ್ಷಣೆ ಕೊಡುತ್ತಿದ್ದೀರಿ ಎಂಬುದನ್ನು ಅವರು ಇಲ್ಲಿ ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ ನಾನು ಆ ರೀತಿ ಅಂದುಕೊಂಡಿಲ್ಲ. ನೀವು ಎರಡು ಕಡೆ ಸಮವಾಗಿದ್ದೀರಿ ಅಂದುಕೊಂಡಿದ್ದೆ. ನೀವು ಆ ಕಡೆಯವರಿಗೆ ರಕ್ಷಣೆ ಕೊಡುವುದಾದರೆ ನಮಗೆ ಇಲ್ಲಿ ಕುಳಿತುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ದಯವಿಟ್ಟು ತಾವು ಏನಾದರೂ ಮಾಡಬೇಕು.

ಅಧ್ಯಕ್ಷರು:- ಅವರು ಹೇಳಿದ್ದಕ್ಕಿಂತ ಕೆಟ್ಟದಾಯಿತು ಈಗ ನೀವು ಹೇಳಿದ್ದುದು.